ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-5 Issue 4, January-February, 2024, Pp. 64-68.
©*IIMRD*, Mysuru
IIMRD JOURNALS
www.iimrd.com

# ಕನ್ನಡ ಭಾಷೆಯ ಪ್ರಾಚೀನತೆ

**ಡಾ. ಶ್ರೀನಿವಾಸ.ಟಿ**
ಸಹಾಯಕ ಪ್ರಾಧ್ಯಾಪಕರು. ಕನ್ನಡ ವಿಭಾಗ, ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು, ಮೈಸೂರು–01

**ಸಾರಾಂಶ: (Abstract)**

*ಒಂದು ಭಾಷೆಯ ಇರುವಿಕೆಯ ಬಗ್ಗೆ ಬರವಣಿಗೆಯ ಬಗ್ಗೆ ಸಾಕ್ಷಿಗಳು ಇಲ್ಲವೆಂದ ಮಾತ್ರಕ್ಕೆ ಆ ಭಾಷೆಯ ಅಸ್ತಿತ್ವವನ್ನೇ ಅಲ್ಲಗಳೆಯಲು ಸಾಧ್ಯವಿಲ್ಲ. ಕರ್ನಾಟಕವೆಂಬ ಭೂಪ್ರದೇಶ ಮತ್ತು ಕನ್ನಡವೆಂಬ ಭಾಷೆಗಳ ನಡುವೆ ಒಂದು ಸಮೀಕರಣವನ್ನು ಮಾಡಲಾಗುತ್ತದೆ. ಆದರೆ ಇದು ಕೂಡ ನೂರಕ್ಕೆ ನೂರರಷ್ಟು ಸರಿಯಲ್ಲ. 'ಕರ್ನಾಟಕ'ವೆಂಬ ಹೆಸರು ಅಥವ ಅದರ ಪೂರ್ವರೂಪಗಳಲ್ಲಿ ಚಲಾವಣೆಯಲ್ಲಿ ಇರಲಿ ಬಿಡಲಿ ಈ ಪ್ರದೇಶಗಳ ಜನರು ಒಂದಲ್ಲ ಒಂದು ಭಾಷೆಯನ್ನು ಬಳಸುತ್ತಿದ್ದು ಅದು ಕನ್ನಡದ ಹಳೆಯ ರೂಪಗಳಲ್ಲಿ ಒಂದಾಗಿರುವುದು ಅನಿವಾರ್ಯ. ಪ್ರಸ್ತುತ ಲೇಖನದಲ್ಲಿ ಕನ್ನಡ ಭಾಷೆಯ ಪ್ರಾಚೀನತೆಯ ಕುರಿತು ವಿವರಿಸಲಾಗಿದೆ.*

**ಮುಖ್ಯಪದಗಳು (Keywords):** ಕನ್ನಡ ಭಾಷೆ, ಹಳೆಗನ್ನಡ, ಪ್ರಾಚೀನತೆ, ಇಸಿಲ, ಚೆನ್, ಮಿಟಚಿ.

**ಪೀಠಿಕೆ**

ಮೂಲದ್ರಾವಿಡ ಭಾಷೆಯಿಂದ ಮೂಡಿದ ಪ್ರಮುಖ ನುಡಿಗಳಲ್ಲಿ ಕನ್ನಡವೂ ಒಂದು. ಇದು ದಕ್ಷಿಣ ದ್ರಾವಿಡ ಭಾಷಾ ಗುಂಪಿಗೆ ಸೇರಿದೆ. ಕ್ರಿಸ್ತಪೂರ್ವ 3ನೇ ಶತಮಾನದಿಂದಲೂ ಕನ್ನಡ ಭಾಷೆ ಪ್ರಚಲಿತವಾಗಿತ್ತು ಎಂಬುದಕ್ಕೆ ಹಲವಾರು ಪುರಾವೆಗಳು ಭಾರತದಾದ್ಯಂತ ಮತ್ತು ವಿದೇಶಗಳಲ್ಲು ಸಾಕಷ್ಟು ದೊರೆತಿವೆ. ಮೂಲ ಲಿಪಿಯಾದ ಬ್ರಾಹ್ಮಿಯಿಂದ ಕನ್ನಡ ಭಾಷೆಯು ಲಿಖಿತ ರೂಪ ಪಡೆದು ಕೊಂಡಿದೆ. ಅಶೋಕನ ಶಿಲಾ ಶಾಸನಗಳ ಮೂಲಕ ಭಾರತೀಯ ಭಾಷೆಗಳು ಆರಂಭ ಆದವು. ಅಶೋಕನ ಬ್ರಹ್ಮಗಿರಿ ಶಾಸನದಲ್ಲಿ ಬಳಕೆಯಾಗಿರುವ 'ಇಸಿಲ' ಎಂಬ ಪದವು ಕನ್ನಡದ ಪದವೆಂದು ಪ್ರೊ.ಡಿ.ಎಲ್.ನರಸಿಂಹಾಚಾರ್ಯರು ಬೇರೆ ಬೇರೆ ಆಧಾರಗಳನ್ನು ನೀಡಿ ನಿರ್ಣಯಿಸಿದ್ದಾರೆ.. ಇದೊಂದೆ ಅಲ್ಲದೆ ಇನ್ನು ಹಲವು ಕನ್ನಡದ ಪದಗಳು ಈ ಶಾಸನದಲ್ಲಿ ಕಂಡು ಬಂದಿವೆ. ಹಾಗೆಯೇ ಟಾಲೆಮಿಯ ಪುಸ್ತಕದಲ್ಲಿಯೂ ಕನ್ನಡ ಪದಗಳ ಬಳಕೆಯ ಬಗ್ಗೆ ತಿಳಿಯ ಬಹುದು. 1 ನೇ ಶತಮಾನದ ತಮಿಳು ಶಾಸನದಲ್ಲಿ ಕನ್ನಡದ ಪದ 'ಅಯ್ಜಯ್ಯ' ಕಂಡು ಬಂದಿದೆ. ಅದೇ ರೀತಿ 3ನೇ ಶತಮಾನದ ತಮಿಳಿನ ಇನ್ನೊಂದು ಶಾಸನದ ಉದ್ದಕ್ಕೂ 'ಒಪ್ಪಾ ನಪ್ಪ ವ್ಲಾನ್' ಎಂಬ ಪದವನ್ನು ಪುನರಾವರ್ತಿಸಲಾಗಿದೆ. ಈ ಒಪ್ಪನಪ್ಪ ಎಂದರೆ ಕನ್ನಡದ 'ಅಪ್ಪ' ಪದವನ್ನ ಹೊಂದಿದೆ. ಹಾಗೆಯೇ ಹಲವು ವಿದ್ವಾಂಸರು ಈ ಶಾಸನಗಳಲ್ಲಿ ಕಂಡು ಬರುವ ವ್ಯಾಕರಣದ ವರ್ಗಗಳು

*Please cite this article as: ಶ್ರೀನಿವಾಸ. ಟಿ.* (2024). ಕನ್ನಡ ಭಾಷೆಯ ಪ್ರಾಚೀನತೆ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 5(4). ಪು.ಸಂ. 64–68.*

ತಮಿಳಿಗಿಂತ ಹೆಚ್ಚಾಗಿ ಕನ್ನಡಕ್ಕೆ ಸೇರಿವೆ ಎಂದು ನಂಬುತ್ತಾರೆ. ಕ್ರಿ.ಶ. 8–9 ನೆಯ ಶತಮಾನಕ್ಕೆ ಮೊದಲು ಸಾಹಿತ್ಯಕ ಸಾಕ್ಷಿಗಳು ಇಲ್ಲದಿರುವುದರಿಂದ ಕನ್ನಡ ಸಾಹಿತ್ಯದ ಪ್ರಾರಂಭವು ಅಸ್ಪಷ್ಟತೆಯಲ್ಲಿ ಮುಚ್ಚಿಹೋಗಿದೆ. ಏಕೆಂದರೆ ಕೆಲವೇ ಕೆಲವು ಶಾಸನ ಪುರಾವೆಗಳು ಲಭ್ಯವಿದ್ದು, ಇತಿಹಾಸದ ಪ್ರಾರಂಭಿಕ ಹಂತಗಳಿಗೆ ಸೇರಿದ ಬಹುತೇಕ ಶಾಸನಗಳನ್ನು ಬ್ರಾಹ್ಮಿಲಿಪಿ ಹಾಗು ಪ್ರಾಕೃತ ಭಾಷೆಯಲ್ಲಿ ಬರೆಯಲಾಗಿದೆ. ಈ ಶಾಸನಗಳಲ್ಲಿ ಬಹುಪಾಲು ವೀರರಿಗೆ ಗೌರವ ಸಲ್ಲಿಸುವ ಕಿರು ಸ್ಮಾರಕ ದಾಖಲೆಗಳಾಗಿವೆ. ಯಾವುದೇ ಭಾಷೆಯು ತನ್ನದೇ ಆದ ಸ್ವತಂತ್ರ್ಯ ರೂಪವನ್ನು ಪಡೆದು ಕೊಳ್ಳುವ ಕೆಲಸವು ನೂರಾರು ವರ್ಷಗಳ ಕಾಲ ನಡೆದಿರುತ್ತದೆ. ಈ ಕಾಲಾವಧಿಯಲ್ಲಿ ಸ್ಪಷ್ಟವಾಗಿ ಕನ್ನಡವು ಅಸ್ತಿತ್ವದಲ್ಲಿತ್ತು ಅಥವಾ ಇಲ್ಲ ಎಂದು ಹೇಳಲಾಗದ ಅವಧಿಯು ಸಾಕಷ್ಟಿರುತ್ತದೆ.

ಕನ್ನಡ ಬರವಣಿಗೆಯ ಪ್ರಪ್ರಥಮ ಉದಾಹರಣೆ ದೊರೆತಿರುವುದು ಕ್ರಿ.ಶ 450 ರ 'ಹಲ್ಮಿಡಿ ಶಾಸನದಲ್ಲಿ' ಹಲವು ಮಂದಿ ವಿದ್ವಾಂಸರು ತೀರ್ಮಾನಿಸಿರುವಂತೆ ಇದೇ ಕನ್ನಡದ ಅತ್ಯಂತ ಪ್ರಾಚೀನ ದಾಖಲೆಯಾಗಿದ್ದು ಈ ಶಾಸನದ ಹಿಂದು ಮುಂದಿನ ಒಂದು ಶತಮಾನದ ಅವಧಿಯಲ್ಲಿ ದೀರ್ಘತೆ ಮತ್ತು ಪ್ರೌಢಿಮೆಯಲ್ಲಿ ಅದನ್ನು ಸರಿಗಟ್ಟುವ ಬೇರೆ ಶಾಸನಗಳಿಲ್ಲ. ಇಲ್ಲಿನ ಪ್ರೌಢ ಭಾಷಾ ಸ್ವರೂಪವನ್ನು ಗಮನಿಸಿದರೆ ಈ ಶಾಸನಕ್ಕಿಂತ ಕೊನೆಯ ಪಕ್ಷ ಎರಡು ಶತಮಾನಗಳ ಹಿಂದೆ ಕನ್ನಡ ಭಾಷೆಯ ಬರವಣಿಗೆ ಪ್ರಾರಂಭವಾಗಿರ ಬೇಕೆಂದು  ಅದಕ್ಕಿಂತ ಒಂದು ಶತಮಾನದ ಹಿಂದೆಯಾದರೂ ಈ ಭಾಷೆ ಅಸ್ತಿತ್ವಕ್ಕೆ ಬಂದಿರ ಬೇಕೆಂದು ಭಾವಿಸಲು ಅಡ್ಡಿಯಿಲ್ಲ ಎಂಬ ಅನಿಸಿಕೆಯು ಕೆಲವು ವಿದ್ವಾಂಸರಿಂದ ವ್ಯಕ್ತವಾಗಿದೆ. ಇದಾದ ಮೇಲೆ ತಮಟಕಲ್ಲು ಪದ್ಯ ಶಾಸನ ದೊರೆತಿದ್ದು ಹಲ್ಮಿಡಿ ಶಾಸನದಂತೆ ಇದೂ ಸಂಸ್ಕೃತ ಭೂಯಿಷ್ಟವಾಗಿದೆ. ಪ್ರಸಿದ್ಧವಾದ ಬಾದಾಮಿ ಶಾಸನಗಳು, ಪುರಾತನ ಕನ್ನಡ ಬರವಣಿಗೆಯ ಮತ್ತಷ್ಟು ಉದಾಹರಣೆಗಳನ್ನು ನೀಡುತ್ತವೆ. ಉಪಲಬ್ಧವಿರುವ ಕನ್ನಡದ ಮೊಟ್ಟ ಮೊದಲ ಕನ್ನಡ ಪುಸ್ತಕವೆಂದರೆ 9 ನೇ ಶತಮಾನದ ಅಮೋಘವರ್ಷ ನೃಪತುಂಗನ 'ಕವಿರಾಜಮಾರ್ಗ' ಈ ಪುಸ್ತಕ ಕನ್ನಡ ಕಾವ್ಯ, ಕನ್ನಡ ನಾಡು, ನುಡಿ ಮತ್ತು ಕನ್ನಡಿಗರ ನುಡಿಯ ಬಗ್ಗೆ ಬರೆಯಲ್ಪಟ್ಟಿದೆ.

ಕನ್ನಡ ಸಾಹಿತ್ಯದ ಪ್ರಾಚೀನತೆಯನ್ನು ಅಂದರೆ ಪಂಪಪೂರ್ವ ಯುಗದ ಸಾಹಿತ್ಯದ ಸ್ವರೂಪವನ್ನು ಗುರ್ತಿಸುವಲ್ಲಿ ಶಾಸನಗಳನ್ನೇ ಅವಲಂಬಿಸ ಬೇಕಾಗಿದೆ. ಕವಿರಾಜಮಾರ್ಗ ಮತ್ತು ಇನ್ನಿತರ ಆಧಾರಗಳು ಕ್ರಿ.ಶ. 850 ಕ್ಕಿಂತ ಹಿಂದೆ ಕನ್ನಡ ಸಾಹಿತ್ಯವಿತ್ತು ಎಂಬುದಕ್ಕೆ ಆಧಾರಗಳೆ ಹೊರತು ಎಷ್ಟು ಹಿಂದೆ ಎಂಬುದಕ್ಕಲ್ಲ. ಹಲ್ಮಿಡಿ ಶಾಸನದ ಭಾಷೆ ಪೂರ್ವದ ಹಳಗನ್ನಡದ ಗದ್ಯವಾಗಿದ್ದು ಆಗಲೆ ಸಂಸ್ಕೃತ ಭಾಷೆಯ ಪೂರ್ಣ ಪ್ರಭಾವಕ್ಕೆ ಒಳಗಾಗಿರುವುದನ್ನು ಗುರ್ತಿಸ ಬಹುದಾಗಿದೆ. ವಚನ ರೂಪವಾಗಿ ಪ್ರಕಟವಾದ ಈ ಶಾಸನವು ಕನ್ನಡ ಸಾಹಿತ್ಯದ ಉಗಮದ ಕುರುಹುಗಳ ಪ್ರತೀಕವಾಗಿ ಪರಿಣಮಿಸಿದೆ. ಇದು ಕನ್ನಡ ಭಾಷೆ ಸಾಹಿತ್ಯಗಳ ಪ್ರಾಚೀನತೆಯನ್ನು ತಿಳಿಯಲು ಪ್ರಮುಖ ಆಕರವಾಗಿರುವುದರ ಜೊತೆಗೆ ಕರ್ನಾಟಕದ ಸಾಂಸ್ಕೃತಿಕ ಚರಿತ್ರೆಯನ್ನು ದಾಖಲಿಸುತ್ತದೆ. ಇದರಲ್ಲಿ ಬಳಕೆಯಾಗಿರುವ ಭಾಷೆ ಪೂರ್ವದ ಹಳಗನ್ನಡದ ಗದ್ಯವಾಗಿದ್ದು ಸಂಸ್ಕೃತ ಭಾಷೆಯ ಪೂರ್ಣ ಪ್ರಭಾವಕ್ಕೆ ಒಳಗಾಗಿರುವುದನ್ನು ಗುರ್ತಿಸ ಬಹುದಾಗಿದೆ. ಈ ಗದ್ಯ ಭಾಷೆಯನ್ನು ಆಧಾರವಾಗಿಟ್ಟು ಕೊಂಡು ಕನ್ನಡ ಸಾಹಿತ್ಯದ ಪ್ರಾಚೀನತೆಯನ್ನು ಕ್ರಿ.ಶ. 5 ನೇ

ಶತಮಾನಕ್ಕೆ ಕೊಂಡೊಯ್ಯಲು ಸಾಧ್ಯವಾಗಿದೆ. ಕನ್ನಡದ ಪ್ರಾಚೀನತೆಯನ್ನು ಕುರಿತು ಬೇರೆ ಬೇರೆ ವಿದ್ವಾಂಸರು ಮಾಡಿರುವ ಸಂಶೋಧನೆಗಳ ಸಾರ ಈ ಕೆಳಕಂಡಂತಿದೆ.

ಭ.ಕೃಷ್ಣಮೂರ್ತಿಯವರು ಹೇಳುವಂತೆ ಮೂಲದ್ರಾವಿಡದಿಂದ ಒಂದು ಕಡೆ ತುಳು ಕೊರಗ ಹಾಗು ಇನ್ನೊಂದು ಕಡೆ ಕನ್ನಡ ಪ್ರತ್ಯೇಕವಾದ ಘಟನೆಯು ಕ್ರಿ.ಪೂ. ಐದನೆಯ ಶತಮಾನಕ್ಕೂ ಹಿಂದೆಯೇ ನಡೆದಿರ ಬೇಕು. ಡಿ.ಎನ್. ಶಂಕರಭಟ್ ತಮ್ಮ 'ಕನ್ನಡ ಭಾಷೆಯ ಕಲ್ಪಿತ ಚರಿತ್ರೆ' ಯಲ್ಲಿ ಮೂಲದ್ರಾವಿಡದಿಂದ ಮೂಲ ಕನ್ನಡದ ಕಡೆಗೆ ನಡೆದ ಚಲನೆಯನ್ನು ವಿವರವಾಗಿ ತಿಳಿಸಿದ್ದಾರೆ. ಜೊತೆಗೆ ಕನ್ನಡದಲ್ಲಿ ಉಳಿದು ಕೊಂಡಿರುವ ಮೂಲದ್ರಾವಿಡ ಅಂಶಗಳನ್ನು ಹೇಳುವಂತೆಯೇ ಬದಲಾವಣೆಯಾಗಿರುವ ಸಂಗತಿಗಳನ್ನೂ ತಿಳಿಸಿದ್ದಾರೆ. ಮೊದಮೊದಲ ಹಂತಗಳಲ್ಲಿ ಕನ್ನಡ ಮತ್ತು ತಮಿಳುಗಳ ನಡುವೆ ಸಾಕಷ್ಟು ಹೋಲಿಕೆಗಳಿರ ಬೇಕು. ಆದರೆ ನಂತರದ ಶತಮಾನಗಳಲ್ಲಿ ಕನ್ನಡವು ಸಂಸ್ಕೃತದ ದಟ್ಟವಾದ ಪ್ರಭಾವಕ್ಕೆ ಗುರಿಯಾಯಿತು. ಈ ಪ್ರಭಾವವು ತಮಿಳಿನೊಂದಿಗೆ ಇದ್ದ ಸಂಬಂಧವನ್ನು ಮರೆ ಮಾಡಿತು. ಆದರೆ ಮುಂದೆ ಕನ್ನಡವು ಸಂಸ್ಕೃತ ಜನ್ಯವಲ್ಲವೆಂದು ಕೇಶಿರಾಜನೆಂಬ ವಯ್ಯಾಕರಣಿಯು ಸ್ಪಷ್ಟಪಡಿಸಿದರು.

ಕನ್ನಡದ ಪ್ರಾಚೀನತೆಯ ಬಗ್ಗೆ ಇರುವ ಸಾಕ್ಷಿಗಳನ್ನು ಸಂಸ್ಕೃತ ಪ್ರಾಕೃತ ಮೂಲಗಳು, ದ್ರಾವಿಡ – ತಮಿಳು ಮೂಲಗಳು ಹಾಗು ದೇಶದಿಂದ ಹೊರಗೆ ದೊರೆತಿರುವ ಮಾಹಿತಿಗಳನ್ನು ಗಮನಿಸಿ ಕೆಲವು ವಿದ್ವಾಂಸರು ಸಂಸ್ಕೃತದ ಛಾಂದೋಗ್ಯ ಉಪನಿಷತ್ತಿನಲ್ಲಿ ಬರುವ 'ಮಿಟಚಿ' (ಮಿಡತೆ), 'ಚೆನ್'(ಚಂದ್ರ), ಎಂಬಿತ್ಯಾದಿ ಪದಗಳ ಆಧಾರದ ಮೇಲೆ ಕನ್ನಡದ ಹಳಮೆಯನ್ನು ವೇದಗಳ ಕಾಲಕ್ಕೆ ಕೊಂಡೊಯ್ಯಲು ಪ್ರಯತ್ನಿಸಿದ್ದಾರೆ. ಹಾಗೆಯೇ 'ಪದ್ಮಪುರಾಣ' ಮತ್ತು 'ಮಾರ್ಕಂಡೇಯ ಪುರಾಣ'ಗಳಲ್ಲಿ ಕರ್ನಾಟಕ ಎಂಬ ಪದವು ದೊರೆತಿದೆ.

ಸಂಸ್ಕೃತದ ಮಹಾಕಾವ್ಯಗಳಾದ 'ರಾಮಾಯಣ ಮತ್ತು ಮಹಾಭಾರತಗಳಲ್ಲಿ ಕರ್ನಾಟಕದ ಪ್ರಸ್ತಾಪವು ಅನೇಕ ಬಾರಿ ಬಂದಿದೆ. ಹಾಲರಾಜನು ಕ್ರಿ.ಶ. 150 ರಲ್ಲಿ ಪ್ರಾಕೃತ ಭಾಷೆಯಲ್ಲಿ ಬರೆದಿರುವ 'ಗಾಥಸಪ್ತಶತಿ' ಎಂಬ ಕಾವ್ಯದಲ್ಲಿ ಬರುವ 'ತೀರ್', 'ತುಪ್ಪ', 'ಪೆಟ್ಟು', 'ಪೊಟ್ಟು', ಮುಂತಾದ ಪದಗಳು ಕನ್ನಡದವೆಂದು ತೋರುತ್ತವೆ. ತಮಿಳು ಭಾಷೆಯ ಬಹು ಹಳೆಯ ಕಾವ್ಯವಾದ ಸಂಗಂ ಯುಗಕ್ಕೆ ಸೇರಿದ 'ಸಿಲಪ್ಪಾದಿಕಾರಂ'ನಲ್ಲಿ ಈ ಪ್ರದೇಶದಲ್ಲಿ ವಾಸಿಸುವ ಜನರನ್ನು 'ಕರುನಾಡಗರ್' ಎಂದು ಕರೆಯಲಾಗಿದೆ.

1904 ರಲ್ಲಿ ಪ್ರೊ. ಹುಲ್ಟ್‌ರವರು ಕ್ರಿಸ್ತಪೂರ್ವ ಯುಗಕ್ಕೆ ಸೇರಿದ 'ಪೇಪಿರಸ್ ಫ್ರಂ ಆಕ್ಸಿರಿಂಕಸ್' ಎಂಬ ದಾಖಲೆಯನ್ನು ಹೆಸರಿಸುತ್ತಾರೆ. ಈ ದಾಖಲೆಗಳೆಲ್ಲವು ಗ್ರೀಕ್ ಭಾಷೆಯಲ್ಲಿದ್ದು ಇವು ಗ್ರೇಟ್ ಬ್ರಿಟನ್ನಿನ 'ರಾಯಲ್ ಏಷ್ಯಾಟಿಕ್ ಸೊಸೈಟಿಯ' ಜರ್ನಲ್ಲಿನಲ್ಲಿ ಪ್ರಕಟವಾಗಿದ್ದಾವೆ. ಇಲ್ಲಿ ದಾಖಲಾಗಿರುವ ಅನೇಕ ಪದಗಳು ಮತ್ತು ಪದದ ಗುಂಪುಗಳು ಕರಾವಳಿ ಪ್ರದೇಶದ ಕನ್ನಡ ಭಾಷೆಗೆ ಸೇರಿದವುಗಳೆಂದು ಹುಲ್ಟ್ ಅಭಿಪ್ರಾಯ ಪಡುತ್ತಾರೆ. ಎಂ.ಗೋವಿಂದ ಪೈ ಈ ಅನಿಸಿಕೆಯನ್ನು ಸಮರ್ಥಿಸಿದರೂ ಇನ್ನು ಕೆಲವು ವಿದ್ವಾಂಸರು ಇವು ತುಳು ಭಾಷೆಯ ಪದಗಳೆಂದು ವಾದಿಸಿದ್ದಾರೆ.

ಕ್ರಿಸ್ತಶಕ ಐದನೆಯ ಶತಮಾನದಷ್ಟು ಹಿಂದಿನ ಅನೇಕ ಶಾಸನಗಳು ನಮಗೆ ದೊರೆತಿದ್ದು ಸಹಜವಾಗಿಯೇ ಅವುಗಳು ಜನರು ಆಡುಮಾತಿಗಾಗಿ ಬಳಸುತ್ತಿದ್ದ ಕನ್ನಡ ಭಾಷೆಯು ಬಹಳ ಹಿಂದೆಯೇ ಇದ್ದಿರ ಬೇಕೆಂದು ತೀರ್ಮಾನಿಸಿರ ಬಹುದು. ತಮಿಳಿನ ಪ್ರಸಿದ್ದ ಶಾಸನ ತಜ್ಞರಾದ ಡಾ. ಐರಾವತಂ ಮಹಾದೇವನ್ ಈ ವಿಷಯದಲ್ಲಿ ಒದಗಿಸಿರುವ ಮಾಹಿತಿಗಳು ಬಹಳ ಉಪಯುಕ್ತವಾಗಿವೆ. ಅವರು ತಮ್ಮ 'ಅರ್ಲಿ ತಮಿಳ್ ಎಪಿಗ್ರಫಿ' ಎಂಬ ಗ್ರಂಥದಲ್ಲಿ ತಿಳಿಸಿರುವ ಪ್ರಕಾರ ತೆಲುಗು ಮತ್ತು ಕನ್ನಡ ಭಾಷೆಗಳಲ್ಲಿ ಲಿಖಿತ ದಾಖಲೆಗಳು ಬರುವುದಕ್ಕಿಂತ ಎಷ್ಟೋ ಹಿಂದಿನಿಂದ ಮೌಖಿಕ ಪರಂಪರೆಯು ಅಸ್ತಿತ್ವದಲ್ಲಿತ್ತು ಎಂದಿರುವುದಲ್ಲದೆ ಅಶೋಕನ ಬಂಡೆ ಶಾಸನಗಳು ಪ್ರಾಕೃತದಲ್ಲಿದ್ದರೂ ಆ ಪ್ರದೇಶದ ಆಡು ನುಡಿ ಕನ್ನಡವೇ ಆಗಿತ್ತೆಂದು ಹೇಳಿದ್ದಾರೆ. ಜೊತೆಗೆ ಈ ಪ್ರಾಕೃತ ಶಾಸನಗಳಲ್ಲಿ ಹಳಗನ್ನಡದ ಪ್ರಭಾವವನ್ನು ಗುರ್ತಿಸಿದ್ದಾರೆ.

ಡಾ.ಷೆಟ್ಟರ್ ಅವರು ತಮ್ಮ ಸಂಶೋಧನೆ ಮತ್ತು ತರ್ಕಗಳ ನೆರವಿನಿಂದ 'ಎರುಮಿ', 'ಕವುಡಿ', 'ಪೊಶಿಲ್', 'ತಾಯಿಯರ್', ಮುಂತಾದ ಪದಗಳಿಗೆ ಹತ್ತಿರವಾದ ತಮಿಳು ಪದಗಳು ದೊರೆಯದಿರುವುದರಿಂದ ಅವುಗಳು ಕನ್ನಡ ಮೂಲದವೇ ಇರಬೇಕೆಂಬುದು ಇವರ ನಿಲುವಾಗಿದೆ. ಇಷ್ಟೇ ಅಲ್ಲದೆ ಮಹಾದೇವನ್ ಕೊಟ್ಟಿರುವ ಪಟ್ಟಿಗೆ ಶೆಟ್ಟರ್ 'ನಾಡು' ಮತ್ತು 'ಇಳಯರ್'' ಎಂಬ ಪದಗಳನ್ನು ಸೇರಿಸುತ್ತಾರೆ. ಈ ಶಾಸನಗಳಲ್ಲಿ ಕಂಡು ಬರುವ ಕೆಲವು ವ್ಯಾಕರಣದ ಸಂಗತಿಗಳು ಕೂಡ ತಮಿಳಿಗಿಂತ ಕನ್ನಡಕ್ಕೆ ನಿಕಟವಾಗಿವೆಯೆಂದು ಮಹಾದೇವನ್ ಅಭಿಪ್ರಾಯ ಪಡುತ್ತಾರೆ. ಈ ಪ್ರದೇಶದಲ್ಲಿ ನಡೆದ ಜೈನ ಧರ್ಮೀಯರ ಚಲನವಲನಗಳೇ ಇಂತಹ ಪ್ರಭಾವಕ್ಕೆ ಕಾರಣವಾಗಿವೆಯೆಂದು ಇಬ್ಬರೂ ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಈ ಎಲ್ಲಾ ಶಾಸನಗಳು ಕ್ರಿಸ್ತಪೂರ್ವ ಒಂದನೇ ಶತಮಾನದಿಂದ ಕ್ರಿಸ್ತಶಕ ನಾಲ್ಕನೇ ಶತಮಾನದವರೆಗಿನ ಅವಧಿಗೆ ಸೇರಿದವು.

ಕನ್ನಡ ಮತ್ತು ಕರ್ನಾಟಕದ ಪ್ರಾಚೀನತೆಯನ್ನು ಸಾಧಿಸುವ ಹಾದಿಯಲ್ಲಿ ಕೆಲಸ ಮಾಡಿರುವ ಮತ್ತೊಬ್ಬ ವಿದ್ವಾಂಸರೆಮದರೆ ಶಂ.ಬಾ. ಜೋಷಿ, ಉತ್ತರ ಕರ್ನಾಟಕ ಮತ್ತು ದಕ್ಷಿಣ ಮಹಾರಾಷ್ಟ್ರಗಳ ಮೇಲೆ ಗಮನ ಹರಿಸಿರುವ ಇವರ ಬರವಣಿಗೆಗಳು 1933 ಕ್ಕು ಹಿಂದೆಯೇ ಪ್ರಕಟವಾಯಿತು. ವಿಫುಲ ಪ್ರಮಾಣದ ಜನಾಂಗಿಕ, ಚಾರಿತ್ರಿಕ ಮತ್ತು ಭಾಷಿಕ ಸಾಕ್ಷಿಗಳನ್ನು ಸಂಗ್ರಹಿಸಿ ಅವೆಲ್ಲವನ್ನು ಬಳಸಿಕೊಂಡು ಕನ್ನಡ ಭಾಷೆ ಮಾತನಾಡುವ ಜನ ಸಮುದಾಯಗಳು ಗೋದಾವರಿ ನದಿಯ ಉತ್ತರದಲ್ಲಿಯೂ ಇದ್ದವೆಂದು ತೋರಿಸಿ ಕೊಡಲು ಪ್ರಯತ್ನಿಸಿದರು. ಜೊತೆಗೆ 'ಕುರ್ಖ್', 'ಮಾಯ್ಯೆ'ರರು ಗೋಲಾರಿ ಹೊಲೆಯರು ಮತ್ತು ಹಳಬರು ಎಂಬ ಸಮುದಾಯಗಳನ್ನು ಇವರು ಹೆಸರಿಸುತ್ತಾ ಆ ಸಮುದಾಯಗಳು ಮಾತನಾಡುವ ಭಾಷೆಗಳಲ್ಲಿ ಅನೇಕ ಕನ್ನಡ ಪದಗಳಿವೆಯೆಂದು ತೋರಿಸಿ ಕೊಟ್ಟಿದ್ದಾರೆ. ಜೋಷಿಯವರ ಪ್ರಕಾರ ಅವುಗಳೆಲ್ಲವು ಅಲೆಮಾರಿಗಳಾದ ಗೊಲ್ಲ ಮತ್ತು ಕುರುಬ ಸಮುದಾಯಗಳು ಬಳಸುತ್ತಿದ್ದ ಪದಗಳಾಗಿವೆ. ಈ ಎಲ್ಲಾ ಸಂಗತಿಗಳನ್ನು ಆಧರಿಸಿ ಜೋಷಿಯವರು ಕೂಡ ಕನ್ನಡವು ಕ್ರಿಸ್ತಶಕದ ಆರಂಭದಿಂದಲೂ ಇತ್ತೆಂದು ವಾದಿಸುತ್ತಾರೆ.

ಒಂದು ಭಾಷೆಯ ಚರಿತ್ರೆಯೆಂದರೆ ಅದು ಭಾಷೆಯ ಬೆಳವಣಿಗೆಯನ್ನು ಮಾತ್ರ ಗುರ್ತಿಸುವುದಲ್ಲ ಆ ಭಾಷೆಯನ್ನಾಡುವ ಜನರ ಸಾಮಾಜಿಕ ಸಾಂಸ್ಕೃತಿಕ ಕಥನವೂ ಹೌದು. ಜಗತ್ತಿನ ಪ್ರಮುಖ ಭಾಷೆಗಳ ಸಾಲಿನಲ್ಲಿ ಪ್ರಾಚೀನತೆ ಹಾಗು ಪ್ರತಿಭೆ ಎರಡೂ ನೆಲೆಯಲ್ಲಿ ನಿಸ್ಸಂದೇಹವಾಗಿ ಕನ್ನಡಕ್ಕೆ ಮಹತ್ವದ ಸ್ಥಾನವಿದೆ.

**ಪರಾಮರ್ಶನ ಗ್ರಂಥಗಳು**


- ಚಿದಾನಂದಮೂರ್ತಿ ಎಂ. –ಹೊಸತು ಹೊಸತು
- ಜೋಷಿ ಶಂ.ಬಾ. – ಕಣ್ಮರೆಯಾದ ಕನ್ನಡ
- ಕನ್ನಡ ಸಾಹಿತ್ಯ ಚರಿತ್ರೆ –ಮುಗಳಿ ರಂ.ಶ್ರೀ.
- ನಾಗಭೂಷಣ ಸಿ.–ಸಾಹಿತ್ಯ ಸಂಸ್ಕೃತಿ ಅನ್ವೇಷಣೆ.
- ಶೆಟ್ಟರ್ ಷ. – ಶಂಗಂ ತಮಿಳಗಂ ಮತ್ತು ಕನ್ನಡ ನಾಡುನುಡಿ.
- ನೇಗಿನಹಾಳ ಎಂ.ಬಿ.– ಪೂರ್ವದ ಹಳಗನ್ನಡ ಶಾಸನಗಳ ಸಾಹಿತ್ಯಕ ಅಧ್ಯಯನ.